ದಿನಾಂಕಃ 16.07.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲುಃ ಅರೋಪಿ ಪರ ವಕೀಲರಿಂದಃ

ನಾನು ಮೂಲತಃ ಅಂದ್ರಪ್ರದೇಶದವನು ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಸ್ವಂತ ಊರು ರಾಮಸಾಗರ ಬಂಗಾರುಪೇಟೆ ತಾಲ್ಲೂಕು ಕೋಲಾರ ಜಿಲ್ಲೆಯಾಗಿರುತ್ತದೆ ಎನ್ನುತ್ತಾರೆ. 2007ರಲ್ಲಿ ನಾನು ಬೆಂಗಳೂರಿಗೆ ಬಂದಿರುತ್ತೇನೆ. ಅ ಸಮಯದಲ್ಲಿ ನಾನು ಬೆಂಗಳೂರಿನ ಕೆಂಗೇರಿಯಲ್ಲಿ ವಾಸಿಸುತ್ತಿದ್ದೇನು. ಅಲ್ಲಿ ನಾನು 1 ವರ್ಷದ ಕಾಲ ವಾಸ ಮಾಡಿದ್ದೇನು. ಅ ನಂತರ ನಾನು ಅರೋಪಿಯವರ ಮನೆಯಲ್ಲಿ ಬಾಡಿಗೆದಾರನಾಗಿ ವಾಸಿಸುತ್ತಿದ್ದೇನು. ಅವರ ಮನೆಯಲ್ಲಿ ನಾನು 3 ವರ್ಷದ ಕಾಲ ವಾಸ ಮಾಡಿದ್ದೇನು. ನಾನು ಅರೋಪಿ ಮನೆಯಲ್ಲಿ ವಾಸ ಮಾಡುತ್ತಿದ್ದ ಸಮಯದಲ್ಲಿ ಪಿಜಿಯನ್ನು ವಾಜಪೇಯಿ ನಗರದಲ್ಲಿ ನಡೆಸುತ್ತಿದ್ದೇನು. ಪಿಜಿ ನಡೆಸುವುದರೊಂದಿಗೆ ನಾನು ಚೀಟಿ ವ್ಯವಹಾರ ಸಹ ಮಾಡುತ್ತಿದ್ದೇನು ಎಂದರೆ ಸರಿಯಲ್ಲ.

ನಾನು ಐಟಿಐ ಪದವೀದರನಾಗಿರುತ್ತೇನೆ. ನಾನು ಅದಾಯ ತೆರಿಗೆ ಪಾವತಿಸುತ್ತಿಲ್ಲ. ನಾನು ಅರೋಪಿಯವರ ಮನೆಯಲ್ಲಿ ಬಾಡಿಗೆದಾರನಾಗಿದ್ದ 3-4 ವರ್ಷ ಸದರಿ ಮನೆಯನ್ನು ಲಾಕ್ ಮಾಡಿದ್ದೇನು ಎಂದರೆ ಸರಿಯಲ್ಲ. ಅ ಸಮಯದಲ್ಲಿ ನಾನು ಚೀಟಿ ವ್ಯವಹಾರ ಮಾಡುತ್ತಿದ್ದು ಅದರಲ್ಲಿ ನನಗೆ ನಷ್ಟ ಉಂಟಾದಾಗ ನಾನು ಬಾಡಿಗೆ ಮನೆಯನ್ನು ಲಾಕ್ ಮಾಡಿದ್ದೇನು ಎಂದರೆ ಸರಿಯಲ್ಲ. ಅದೇ ಏರಿಯಾದ ಮಂಜುನಾಥ್‌ರವರು ನನಗೆ ಪರಿಚಯವಿರುತ್ತಾರೆಂದರೆ ಸರಿಯಲ್ಲ. ಸದರಿ ಮಂಜುನಾಥ್‌ರವರನ್ನು ಕರೆದುಕೊಂಡು ಹೋಗಿ ಮನೆ ಖಾಲಿ ಮಾಡಬೇಕಾದರೆ ರೂ 10 ಲಕ್ಷ ಹಣ ಕೊಡಬೇಕೆಂದು ಅರೋಪಿಯವರ ಬಳಿ ಕೇಳಿದ್ದೇನು ಎಂದರೆ ಸರಿಯಲ್ಲ. ಅ ಸಮಯದಲ್ಲಿ ತೀರ್ಮಾನವಾದ ನಂತರ ಅರೋಪಿಯವರು ನನಗೆ ರೂ 5 ಲಕ್ಷ ಹಣವನ್ನು ಅರ್‌ಟಿಜಿಎಸ್ ಮೂಲಕ ನೀಡಿರುತ್ತಾರೆಂದರೆ ಸರಿಯಲ್ಲ.ಸಾಕ್ಷಿಯು ನನ್ನಿಂದ ಪಡೆದ ಹಣಕ್ಕೆ ಅರೋಪಿಯವರು ರೂ 5 ಲಕ್ಷ ಹಣವನ್ನು ಅರ್‌ಟಿಜಿಎಸ್ ಮೂಲಕ ಹಿಂದುರುಗಿಸಿರುತ್ತಾರೆ ಎಂದು ಹೇಳುತ್ತಾರೆ.

ನಾನು ಪಿಜಿ ಹಾಸ್ಟಲ್ ನಡೆಸುತ್ತಿದ್ದ ಸಮಯದಲ್ಲಿ ನನಗೆ ತಿಂಗಳಿಗೆ ರೂ 15 ರಿಂದ 20 ಸಾವಿರ ಆದಾಯವಿತ್ತು. ನನ್ನ ಬಳಿ ಆ ಸಮಯದಲ್ಲಿ ರೂ 8 ಲಕ್ಷ ಹಣವಿತ್ತು ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಆರೋಪಿಯವರಿಗೆ ರೂ 8 ಲಕ್ಷ ಹಣವನ್ನು ನೀಡಿದ ಸಮಯದಲ್ಲಿ ಅವರಿಂದ ಯಾವುದೇ ರಸೀದಿ ಪಡೆದುಕೊಂಡಿಲ್ಲ. ರೂ 20 ಸಾವಿರಕ್ಕಿಂತ ಹಣದ ವ್ಯವಹಾರವನ್ನು ನಗದಾಗಿ ಮಾಡಬಾರದು ಎನ್ನುವ ಬಗ್ಗೆ ನನಗೆ ಗೊತ್ತಿರುತ್ತದೆ. ರೂ 8 ಲಕ್ಷ ಹಣ ಆರೋಪಿಯವರಿಗೆ ನಾನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ರೂ 8 ಲಕ್ಷ ಹಣದ ಅವಶ್ಯಕತೆ ಆರೋಪಿಯವರಿಗೆ ಇರುವುದಿಲ್ಲ ಎಂದರೆ ಸರಿಯಲ್ಲ.

ವಿವಾದಿತ ಚೆಕ್ಕಿನೊಂದಿಗೆ ಇತರೆ ಸಹಿ ಮಾಡಿದ ಚೆಕ್ಕುಗಳು ಹಾಗೂ ದಾಖಲೆ ಕಳೆದುಹೋಗಿರುತ್ತದೆಂದು ಆರೋಪಿ ದಿಃ 13.02.2017ರಂದು ಹೆಚ್‌ಎಸ್‌ಆರ್ ಲೇಔಟ್ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆಂದರೆ ಸರಿಯಲ್ಲ. ಆರೋಪಿಯವರ ಮನೆಯಲ್ಲಿ ನಾನು ಬಾಡಿಗೆಗೆ ವಾಸವಿದ್ದ ಸಮಯದಲ್ಲಿ ಕೇವಲ ಅವರ ಮನೆಯ ಕಾರ್ಯಕ್ರಮಕ್ಕೆ ಹೋಗುತ್ತಿದ್ದೇನು. ಆ ಸಮಯದಲ್ಲಿ ಆರೋಪಿಯವರಿಗೆ ಗೊತ್ತಿಲ್ಲದಂತೆ ನಾನು ವಿವಾದಿತ ಚೆಕ್ಕನ್ನು ತೆಗೆದುಕೊಂಡು ಹೋಗಿದ್ದೇನು ಎಂದರೆ ಸರಿಯಲ್ಲ. ಸದರಿ ವಿವಾದಿತ ಚೆಕ್ಕನ್ನು ನಾನು ದುರುಪಯೋಗಪಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ವಿವಾದಿತ ಚೆಕ್ಕಿನಲ್ಲಿರುವ ಬರವಣಿಗೆಯನ್ನು ಆರೋಪಿಯವರೇ ಬರೆದುಕೊಟ್ಟಿರುತ್ತಾರೆ. ವಿವಾದಿತ ಚೆಕ್ಕಿನಲ್ಲಿ ನನ್ನ ಹೆಸರು ಕಪ್ಪು ಶಾಹಿಯಲ್ಲಿ ಹಾಗೂ ಮೊತ್ತದ ಸಂಖ್ಯೆ ಹಾಗೂ ಅಕ್ಷರಗಳು ನೀಲಿ ಶಾಹಿಯಲ್ಲಿದೆಯೆಂದರೆ ಸರಿ. ವಿವಾದಿತ ಚೆಕ್ಕಿನಲ್ಲಿ ಕಪ್ಪು ಶಾಹಿಯಲ್ಲಿರುವ ಬರವಣಿಗೆ ನಾನೇ ಮಾಡಿರುತ್ತೇನೆಂದರೆಸ ರಿಯಲ್ಲ. ಆರೋಪಿಯವರಿಗೆ ನಾನು ಯಾವುದೇ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಿವಾದಿತ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ನೋಟೀಸು ನೀಡಿ ಆರೋಪಿಯವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯವರು ನನಗೆ ಯಾವುದೇ ಹಣ ಕೊಡಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ. ಚೀಟಿ ವ್ಯವಹಾರದಲ್ಲಿ ಬೇರೆಯವರಿಗೆ ನಾನು ನಷ್ಟ ಉಂಟು ಮಾಡಿರುವ ಕಾರಣ ಸದರಿ ಏರಿಯಾದವರು ನನ್ನನ್ನು

ಹುಡುಕಾಟ ಮಾಡುತ್ತಿದ್ದಾರೆಂದರೆ ಸರಿಯಲ್ಲ. ರೂ 5 ಲಕ್ಷ ಹಣವನ್ನು ಆರೋಪಿಯವರು ನಾನು ಮನೆ ಖಾಲಿ ಮಾಡಿದ ಸಮಯದಲ್ಲಿ ಆ ಉದ್ದೇಶಕ್ಕಾಗಿ ನೀಡಿರುತ್ತಾರೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಒ ಹೇ ಕೇ ಸ ಇದೆ

17ನೇ ಅಪರ ನ್ಯಾಯಾಧೀಶರು